## ಕಳೆದ ಸಂಚಿಕೆಯಲ್ಲಿ



ಮಾರ್ಕೋ ಜೊತೆಗಿನ ಸಾಂಗತ್ಯದಲ್ಲಿ ನ್ಯಾನ್ಸಿಯ ಜೀವನ ಮತ್ತೆ ಹೊಸ ರಂಗುಗಳನ್ನು ತುಂಬಿಕೊಂಡಿತು. ಮಾರ್ಕೋನ ತಂದೆತಾಯಿಯರಾದ ಬರ್ನಾರ್ಡ್ ಮತ್ತು ಅಲಿಸಾ ಅವರದು ಶ್ರೀಮಂತ ಕುಟುಂಬ. ಹೊಸ ಸಂಬಂಧದಲ್ಲಿ ಮತ್ತೊಮ್ಮೆ ತಾಯಿಯಾದ ನ್ಯಾನ್ಸಿ, ತನ್ನ ಮಗುವಿಗೆ ಅಗಲಿದ ಸಹೋದರ ನೀಲ್‌ನ ಹೆಸರಿಟ್ಟಳು. ಮಾರ್ಕೋ ಕೂಡ ತಂದೆಯಾದ ಖುಷಿಯಲ್ಲಿದ್ದ. ಅದೇ ಸಮಯದಲ್ಲಿ ಮಾರ್ಕೋಗೆ ಅಮೆರಿಕದಲ್ಲಿ ಉದ್ಯೋಗ ದೊರೆತು, ಅವನು ಸ್ಥಳಾಂತರಗೊಳ್ಳಲು ಸಂಭ್ರಮದಿಂದ ಸಿದ್ಧನಾದ. ನ್ಯಾನ್ಸಿ ತನ್ನ ಪರಿವಾರಕ್ಕಾಗಿ ಉದ್ಯೋಗವನ್ನು ತ್ಯಜಿಸಬೇಕಾಯಿತು. ಸಂಬಂಧಗಳ ಬೆನ್ನತ್ತಿ ದೇಶಗಳನ್ನು ಸುತ್ತುವ ಅವಕಾಶ ಪಡೆದ ನ್ಯಾನ್ಸಿ, ಈಗ ಅಮೆರಿಕದ ಹೊಸ ಅನುಭವಕ್ಕೆ ತನ್ನನ್ನೊಡ್ಡಿಕೊಂಡಳು. ಅಮೆರಿಕದಲ್ಲಿನ ವಾಸ ಅವಳ ಪಾಲಿಗೆ ವಿಶೇಷವಾಗಿತ್ತು. ಅವಳ ಮೊದಲ ಸಂಬಂಧದ ಮಗ ಜೋಶುಆ ಅಮೆರಿಕದಲ್ಲಿ ಯೂನಿವರ್ಸಿಟಿಯೊಂದರಲ್ಲಿ ವಿದ್ಯಾರ್ಥಿಯಾಗಿದ್ದ.

ಅದು ಇಂದು ಈಡೇರಿತ್ತು. ಜೋಶ್ ಸಹ ಉತ್ತಮ ಈಜುಪಟುವಾಗಿದ್ದ. ಆದರೆ ಅವನು ನನಗೆ, 'ಮಾಮ್, ನಾನು ನಿಮ್ಮನ್ನು ಸ್ವಿಮ್ಮಿಂಗ್‌ನಲ್ಲಿ ಸೋಲಿಸಲಾರೆ' ಎನ್ನುತ್ತಿದ್ದ.

ಒಂದು ಒಂದೂವರೆ ಗಂಟೆಗಳ ಕಾಲ ಈಜಿ, ನಾನು ಹೊರಬಂದೆ. ಕರತಾರನಿಗೆ ಧನ್ಯವಾದಗಳನ್ನು ಹೇಳುತ್ತಾ ಅವನ ಕೈಗಳಿಂದ ನೀಲ್‌ನನ್ನು ಎತ್ತಿಕೊಂಡೆ. ಕರತಾರ ಸಹ ಈಜಲು ಹವಣಿಸುತ್ತಿದ್ದ. ಅವನು ಈ ಮೊದಲೇ ಸ್ವಿಮ್ಮಿಂಗ್ ಸೂಟನ್ನು ಧರಿಸಿದ್ದ. ತನ್ನ ಪೇಟ ಕಳಚಿ, ನನಗೆ ಕೊಟ್ಟು, ಆರು ಅಡಿ ಮೂರು ಇಂಚಿನ ಯುವಕ ಕರತಾರ್ ಸಮುದ್ರದೆಡೆಗೆ ಓಡಿ ಹೋದ.

'ಪಾಲ್, ನಾನು ಸಾಮಾನ್ಯವಾಗಿ ಪರಾಕ್ರಮದ ಬಗ್ಗೆ ಯೋಚಿಸುತ್ತೇನೆ. ಪರಾಕ್ರಮವೆಂದರೇನು? ನೀವು ಹೇಳುವಿರಾ?'

ಪಾಲ್ ಯೋಚಿಸಿ ಹೇಳುತ್ತಾನೆ, 'ನನ್ನ ಅಭಿಪ್ರಾಯದಲ್ಲಿ ಪರಾಕ್ರಮವೆಂದರೆ, ನಿಮ್ಮ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗದ ಕೆಲಸವನ್ನು ಮಾಡುವ ಧೈರ್ಯ ವಹಿಸುವುದೇ ಪರಾಕ್ರಮ.'

ಪಾಲ್, ನೀವು ಸೂಕ್ತವಾದುದನ್ನೇ ಹೇಳಿದಿರಿ. ಪರಾಕ್ರಮವೆಂದರೆ, ಏನಾದರೂ ವಿಲಕ್ಷಣ ಕೆಲಸವನ್ನು ಮಾಡುವುದು ಅಥವಾ ಕೆಲಸವೊಂದರಲ್ಲಿ ಪಾರಂಗತನಾಗುವುದಲ್ಲ, ಪ್ರತಿಯಾಗಿ ನಿಮಗೆ ಅನುಭವವಿಲ್ಲದ ಕೆಲಸವನ್ನು ಮಾಡುವುದು ಅಥವಾ ಯಾವುದನ್ನು ಮಾಡಲು ನಿಮ್ಮ ಮನಸ್ಸು ಭಯಪಡುವುದೋ, ಅದನ್ನು ಮಾಡಲು ನೀವು ಮುಂದುವರೆಯುವುದಾಗಿದೆ. ಕರತಾರ ಯಾವ ಹಂತದ ಈಜುಪಟುವಾಗಿದ್ದ ಎಂಬುದು ನನಗೆ ಗೊತ್ತಿರಲಿಲ್ಲ. ಅವನು ತೀರದಿಂದ ನೀರಿಗೆ ಹಾರಿ, ಜೋಶ್‌ನೊಂದಿಗೆ ಕೈಕಾಲು ಬಡಿಯಲಾರಂಭಿಸಿದ. ನಾನು ತೀರದಲ್ಲಿ ಕೂತು, ನೀಲ್‌ನನ್ನು ಮಡಿಲಿನಲ್ಲಿಟ್ಟುಕೊಂಡು ಜೋಶ್ ಮತ್ತು ಕರತಾರ, ಇಬ್ಬರೂ ಸಮುದ್ರದ ಅಲೆಗಳಲ್ಲಿ ಆಡುವುದನ್ನು ನೋಡುತ್ತಿದ್ದೆ. ಕರತಾರನ ಜಡೆ ಬಿಚ್ಚಿತ್ತು. ಅವನ ತಲೆಕೂದಲುಗಳು ಹರಡಿ ನೀರಿನಲ್ಲಿ ತೇಲುತ್ತಿದ್ದವು. ಅವನ ತಲೆಕೂದಲು ತುಂಬಾ ಉದ್ದ ಮತ್ತು ದಟ್ಟವಾಗಿರುವುದನ್ನು ನಾನು ಮೊದಲ ಬಾರಿಗೆ ನೋಡಿದೆ.

ನಾನು ಮಂತ್ರಮುಗ್ಧಳಾಗಿ ಇಬ್ಬರು ಗೆಳೆಯರು ಈಜುವುದನ್ನು ನೋಡುತ್ತಾ, ನೀಲ್‌ಗೆ ಬೇಬಿ ಫುಡ್ ತಿನ್ನಿಸುತ್ತಿದ್ದೆ. ಇದ್ದಕ್ಕಿದ್ದಂತೆ ಸಮುದ್ರದ ತೀವ್ರ ಅಲೆಯೊಂದು ಕರತಾರನಿಗೆ ತೀವ್ರವಾಗಿ ಬಡಿದಿದ್ದನ್ನು ನೋಡಿದೆ. ಕರತಾರ ಈಜುತ್ತಿರಲಿಲ್ಲ, ಪ್ರತಿಯಾಗಿ ಮುಳುಗೇಳುತ್ತಿದ್ದ. ಅವನು ಇನ್ನೂ ಕೈಕಾಲು ಬಡಿಯುತ್ತಲೇ ಇದ್ದ... ಆದರೆ ನನ್ನ ಊಹೆ ಭಿನ್ನವಾಗಿದೆ. ನಾನು ಮೇಲೆದ್ದು, ಅವನು ವಾಸ್ತವವಾಗಿಯೂ ಮುಳುಗುತ್ತಿರುವನೇ ಎಂದು ಅವನ ಮೇಲೆ ಗಮನಹರಿಸಿದೆ. ಮರುಕ್ಷಣವೇ ನಾನು ನೀಲ್‌ನನ್ನು ಮಡಿಲಿನಲ್ಲಿಟ್ಟುಕೊಂಡು ಸಮುದ್ರದೆಡೆಗೆ ಓಡಿದೆ, ಆದರೆ ದಡದಲ್ಲಿ ಕಾಲುಗಳು ಹೂತವು. ನಾನು ಲೈಫ್ ಸೇವಿಂಗ್ ಸ್ಟ್ರೋಕ್ ಕಲಿತಿದ್ದೆ. ಮುಳುಗುವವನನ್ನು ಹಿಂದಿನಿಂದ ಹಿಡಿದುಕೊಳ್ಳಬೇಕಾಗುತ್ತದೆ, ಇಲ್ಲದಿದ್ದಲ್ಲಿ ಅವನು ನಮ್ಮನ್ನೂ ಮುಳುಗಿಸುತ್ತಾನೆ, ಕೆಳಗಿನ ಕೈಯಲ್ಲಿ ಮಾತ್ರ ಚಲನೆಯಿರುತ್ತದೆ, ಮೇಲಿನ ಕೈ ಮುಳುಗುವವನನ್ನು ಎಳೆಯುತ್ತದೆ ಎಂಬುದನ್ನು ನಾನು ನೆನಪಿಸಿಕೊಂಡೆ.

ನಾನೊಬ್ಬ ಪ್ರಸಿದ್ಧ ಈಜುಪಟುವಾಗಿದ್ದೆ; ಆದರೆ ಸಮುದ್ರಕ್ಕೆ ಹಾರಿ ಕರತಾರನನ್ನು ಪಾರುಮಾಡುವ ಧೈರ್ಯವನ್ನು ವಹಿಸದಾದೆ. ನಾನು ಗಟ್ಟಿಯಾಗಿ, 'ಅವನನ್ನು ಕಾಪಾಡಿ... ಅವನನ್ನು ಕಾಪಾಡಿ... ಅವನು ಮುಳುಗುತ್ತಿದ್ದಾನೆ...' ಎಂದು ಕಿರುಚಲಾರಂಭಿಸಿದೆ.

ಜೋಶ್ ಅಲೆಗಳೊಂದಿಗೆ ಹೋರಾಡುತ್ತಾ ಕರತಾರನೆಡೆಗೆ ಹೋಗುತ್ತಿರುವುದನ್ನು ನಾನು ನೋಡಿದೆ. ಆದರೆ ಕರತಾರ ಅವನಿಂದ ದೂರವಾಗುತ್ತಲೇ ಇದ್ದ.

'ಬೇಡ ಜೋಶ್... ನೀನು ಹೊರಗೆ ಬಾ... ಅಲೆಗಳ ಹೊಡೆತ ತೀವ್ರವಾಗಿದೆ. ನೀನೂ ಮುಳುಗಿಬಿಡ್ತೀಯ' ಮತ್ತೆ ಕಿರುಚಿದೆ. ಆದರೆ ಜೋಶ್‌ಗೆ ನನ್ನ ಮಾತುಗಳು ಕೇಳಿಸಲಿಲ್ಲ ಅಥವಾ ಅವನು ಕೇಳಲಿಲ್ಲ.

ಅಕ್ಕಪಕ್ಕದಲ್ಲಿ ನಿಂತಿದ್ದವರು ತಮಾಷೆಯನ್ನು ನೋಡುತ್ತಿದ್ದರು. ಎಲ್ಲರೂ ನನ್ನ ಹಾಗೆಯೇ... ಎಲ್ಲರ ಕಾಲುಗಳು ಮರಳಿನಲ್ಲಿ ಹೂತು ಹೋಗಿದ್ದವು. ಏನು ಮಾಡುವುದು? ನಾನು ಒಂದೇ ಸಮನೆ ಕಿರುಚುತ್ತಿದ್ದೆ. ಮರದ ಕೊಂಬೆ, ಟವಲ್, ಹಗ್ಗ ಅಥವಾ ಸ್ವಿಮಿಂಗ್ ರಿಂಗ್ ಅವನೆಡೆಗೆ ಎಸೆಯಲು ತೀರದಲ್ಲಿ ಹುಡುಕಾಡಿದೆ. ಕಡೆಗೆ ಅಲ್ಲಿಯೇ ಇದ್ದ ಮಹಿಳೆಯೊಬ್ಬಳು ನನಗೆ, 'ಬೋಟ್ ಸರ್ವಿಸ್ ಮಾಡುವವರಿಗೆ ಹೇಳಿ, ಅವರ ಬೂಥ್ ಅಲ್ಲಿದೆ ನೋಡಿ...' ಎಂದಳು. ನಾನು ನೀಲ್‌ನನ್ನು ಅವಳ ಮಡಿಲಿಗೆ ಹಾಕಿ, ಬೋಟ್ ರೆಂಟಿಂಗ್ ಬೂಥ್ ಕಡೆಗೆ ಓಡಿದೆ. ನಾನು ಗಾಬರಿಯಿಂದ ಕೈಯಾಡಿಸುತ್ತಾ, ಕಿರುಚುತ್ತಾ ಓಡುತ್ತಿರುವುದನ್ನು ಇಬ್ಬರು ಯುವಕರು ನೋಡಿ, ನನ್ನ ಬಳಿಗೆ ಓಡಿ ಬಂದರು.

'ಅವನು ಮುಳುಗುತ್ತಿದ್ದಾನೆ... ಆ ಉದ್ದಲು ಕೂದಲಿನ ಸರದಾರ... ಅವನನ್ನು ರಕ್ಷಿಸಿ...' ನಾನು ಏದುಸಿರು ಬಿಡುತ್ತಾ ಹೇಳಿದೆ.

ಕರತಾರ ದಡದಿಂದ ತುಂಬಾ ದೂರಕ್ಕೆ ಹೋಗಿದ್ದ. ಆದರೆ ಅವನ ಕೈಯೊಂದು ಕಾಣಿಸುತ್ತಿತ್ತು. ಯುವಕರು ತಕ್ಷಣ ತಮ್ಮ ಶರ್ಟ್ ಕಳಚಿ, ಸಮುದ್ರಕ್ಕೆ ಹಾರಿದರು. ಹಿಂದಿನಿಂದ ಒಂದು ದೋಣಿ ಸಹ ಅವರನ್ನು ಹಿಂಬಾಲಿಸಿತು. ನನ್ನ ಹೃದಯದ ಬಡಿತ ತೀವ್ರವಾಯಿತು, ಆ ಯುವಕರು ಕರತಾರನೆಡೆಗೆ ಹೋಗುತ್ತಿರುವುದನ್ನು ನೋಡಿದೆ. ಅಕ್ಕಪಕ್ಕದಲ್ಲಿದ್ದ ಜನರೂ ನೋಡುತ್ತಿದ್ದರು. ಎಲ್ಲರೂ ಸ್ಥಿರವಾಗಿ ನಿಂತಿದ್ದರು. ಜೋಶ್ ಸಹ ಸುಮಾರಾಗಿ ಕರತಾರನ ಸಮೀಪಕ್ಕೆ ಹೋಗಿದ್ದ. ಆದರೆ ಆ ಯುವಕರ ವೇಗ ತೀವ್ರವಾಗಿತ್ತು. ಅವರು ಜೋಶ್‌ನನ್ನು ಹಿಂದಕ್ಕೆ ಹಾಕಿ ಕರತಾರನ ಸಮೀಪಕ್ಕೆ ಮೊದಲು ಹೋದರು.

ಇಬ್ಬರೂ ಸೇರಿ ಕರತಾರನನ್ನು ಮೇಲಕ್ಕೆ ಎಳೆದುಕೊಂಡರು. ಎತ್ತರದ ನಿಲುವಿನ, ದಷ್ಟಪುಷ್ಟನಾಗಿದ್ದ ಕರತಾರನನ್ನು ಎಳೆದು ಅವನನ್ನು ದಡಕ್ಕೆ ತರಲು ಅವರು ತುಂಬಾ ಸಾಹಸ ಮಾಡಬೇಕಾಯಿತು. ಸರಿ, ಅಷ್ಟರಲ್ಲಿ ದೋಣಿ ಸಹ ಅವರ ಸಮೀಪಕ್ಕೆ ಹೋಗಿತ್ತು. ಕರತಾರನನ್ನು ದೋಣಿಯಲ್ಲಿ ಮಲಗಿಸಿ ದಡಕ್ಕೆ ತರಲಾಯಿತು. ನನ್ನೊಂದಿಗೆ ತೀರದಲ್ಲಿ ನಿಂತರವರೆಲ್ಲರೂ ನೆಮ್ಮದಿಯಿಂದ ಉಸಿರಾಡಿದರು. ಕರತಾರನನ್ನು ಸಾವಿನ ದವಡೆಯಿಂದ ಎಳೆದು ತಂದಿದ್ದ ಆ ಇಬ್ಬರು ಯುವಕರು ಎಲ್ಲರಿಗೂ ದೇವದೂತರಾಗಿ ಕಾಣುತ್ತಿದ್ದರು.

ಕರತಾರನ ಸ್ಥಿತಿ ನಾಜೂಕಾಗಿತ್ತು, ಅವನು ಅರೆ ಮೂರ್ಛಾವಸ್ಥೆಯಲ್ಲಿದ್ದ. ಅವನನ್ನು ಕೂಡಲೇ ಫಸ್ಟ್ ಏಡ್ ಟೆಂಟ್‌ಗೆ ಕರದೊಯ್ಯಲಾಯಿತು. ಅದೃಷ್ಟವೆಂಬಂತೆ, ಅಲ್ಲಿಗೊಬ್ಬ ವೈದ್ಯರು ಬಂದರು.